# ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಮಹಿಳೆ: ಸೈದ್ಧಾಂತಿಕ ಆಯಾಮಗಳು

**ಸುಮಾ ವಸಂತ ಸಾವಂತ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಜಿ.ಐ. ಬಾಗೇವಾಡಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ.

DOI: https://doi.org/10.5281/zenodo.16679218

## ABSTRACT:

ಭಾರತದ ಸ್ವಾತಂತ್ರ್ಯ ಹೋರಾಟವು ಬ್ರಿಟಿಷ್ ಆಡಳಿತದಿಂದ ದೇಶವನ್ನು ಮುಕ್ತಗೊಳಿಸಲು ನಡೆದ ಒಂದು ಐತಿಹಾಸಿಕ ಚಳುವಳಿಯಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಿದರು ಮತ್ತು ಅವರ ಅಸ್ಮಿತೆಯನ್ನು ಬಲಪಡಿಸಿದರು. ಅವರು ಕೇವಲ ಹೋರಾಟಗಾರರಾಗದೆ ಸಮಾಜ ಸುಧಾರಕರು, ಶಿಕ್ಷಣ ತಜ್ಞರು ಮತ್ತು ಸಮಾಜ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದರು. ಅವರ ತ್ಯಾಗ ಬಲಿದಾನಗಳು ಭಾರತದ ಸ್ವಾತಂತ್ರ್ಯ ಚಳುವಳಿಗೆ ಹೊಸ ದಿಕ್ಕನ್ನು ನೀಡಿತು. ವಾಸ್ತವವಾಗಿ ಅಂದಿನ ರಾಷ್ಟ್ರೀಯ ಹೋರಾಟವು 'ಸ್ವಾತಂತ್ರ್ಯಕ್ಕಾಗಿನ ಹೋರಾಟ'ವಾಗಿದ್ದಿತು, ಸ್ವಾತಂತ್ರ್ಯವು ಜನತೆಗೆ ದೊರಕಬೇಕಿರುವುದು 'ಸ್ವಾತಂತ್ರ್ಯಕ್ಕಾಗಿನ ಹೋರಾಟ'ದ (೧೯೪೭ರ) ನಂತರವೇ ಎನ್ನಬಹುದು. ನಿಜಾರ್ಥದಲ್ಲಿ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಭಾವಿಸಿದ್ದ ಉದಾತ್ತ ಮೌಲ್ಯಗಳು ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಿಂದ ನಿರಾಕರಣೆಗೊಳಗಾಗಿದ್ದವು. ಈ ಮೌಲ್ಯಗಳು ಸಾಕಾರಗೊಂಡು ಆಚರಣೆಗೆ ಬರಬೇಕಿದ್ದುದು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲೇ. ಇದಕ್ಕೆ ದಿಕ್ಸೂಚಿಯನ್ನು ಒದಗಿಸಿದ್ದು "ಭಾರತದ ಸಂವಿಧಾನ". ಸಂವಿಧಾನದ ಆಶಯಗಳು ಸ್ವಾತಂತ್ರ್ಯ ಹೋರಾಟದ ಆಶಯಗಳ ಮೊತ್ತವಾಗಿ ಅದರಲ್ಲಿ ಪ್ರತಿಫಲನಗೊಂಡಿವೆ. ಈ ನೆಲೆಯಲ್ಲಿ ದೇಶದ 'ಹಲವು ಸ್ವಾತಂತ್ರ್ಯ'ಗಳಲ್ಲಿ 'ಮಹಿಳಾ ಸ್ವಾತಂತ್ರ್ಯ'ವು ಎಷ್ಟರಮಟ್ಟಿಗೆ ದಕ್ಕಿದೆ ಎಂದು ಕೇಳುವ ಜರೂರು ಇಂದಿನದು. ಅಂದರೆ ಭಾರತವು ಸ್ವಾತಂತ್ರ್ಯಗೊಂಡ ನಂತರದ ಈ ಏಳು ದಶಕಗಳಲ್ಲಿ ಸಮಾನತೆ, ನ್ಯಾಯಪರತೆ, ಸ್ವಾತಂತ್ರ್ಯ ಮತ್ತು ಘನತೆಗಳು ಈ ದೇಶದ ಮಹಿಳೆಗೆ ಎಷ್ಟು ತಲುಪಿದೆ ಎಂಬುದರ ಮೌಲ್ಯಮಾಪನದ ಅಗತ್ಯತೆ ಇದೆ.

## KEYWORDS:

ಸ್ವಾತಂತ್ರ್ಯ ಹೋರಾಟ, ಮಹಿಳಾ ಐಡೆಂಟಿಟಿ, ರಾಷ್ಟ್ರೀಯತೆ, ಸಮಾನತೆ, ನ್ಯಾಯಪರತೆ, ಸ್ತ್ರೀವಾದ.

ಚರಿತ್ರೆ ಬರವಣಿಗೆಯಲ್ಲಿ (ಹಿಸ್ಟೋರಿಯೋಗ್ರಫಿ) ಮಹಿಳಾ ಚರಿತ್ರೆ ಬರವಣಿಗೆಯು ಇಂದು ಪ್ರಾಮುಖ್ಯತೆ ಪಡೆಯುತ್ತಿದೆ. ಇದಕ್ಕೆ ಸ್ತ್ರೀವಾದಿ ಬರವಣಿಗೆಗಳು ಒತ್ತಾಸೆಯನ್ನು ನೀಡಿವೆ ಮತ್ತು ಸೈದ್ಧಾಂತಿಕವಾಗಿ ವಿವರಿಸಿಕೊಳ್ಳಲು ಬೇಕಾದ ಸಲಕರಣೆಗಳನ್ನು ಒದಗಿಸಿವೆ. ಪ್ರಬಲ ವಸಾಹತುಶಾಹಿ ಬ್ರಿಟನ್ನಿನ ದಮನದ ವಿರುದ್ಧ ಮೂಡಿಬಂದ ಮಹತ್ವದ ವಿದ್ಯಮಾನವಾದ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ಕಾಣಬಹುದು. ಈ ಹೋರಾಟವು ದೇಶವನ್ನು ಒಂದುಗೂಡಿಸುವಲ್ಲಿ ಮತ್ತು ವಿವಿಧ ಜನಸಮುದಾಯಗಳನ್ನು ಕ್ರಮೇಣ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು. ಪ್ರಸ್ತುತ ಲೇಖನವು ಮಹಿಳೆಯು ಸ್ವಾತಂತ್ರ್ಯ ಹೋರಾಟದ ಭಾಗವಾಗಲು ಇದ್ದ ಪ್ರಭಾವ-ಪ್ರೇರಣೆಗಳ ಕುರಿತು ಮತ್ತು ಅವರು ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ ನಂತರದಲ್ಲಾದ ಬೆಳವಣಿಗೆಗಳ ಕುರಿತು ಇರುವ ಸೈದ್ಧಾಂತಿಕ ವಿಮರ್ಶೆಯನ್ನು ಒಳಗೊಂಡಿದೆ. ಅಂತೆಯೇ ಈ ಹೋರಾಟದಲ್ಲಿ ಭಾಗವಹಿಸಿದ್ದ ವಿವಿಧ ಪ್ರದೇಶಗಳ, ಸಾಮಾಜಿಕ ವರ್ಗಗಳ ಮಹಿಳೆಯರನ್ನು ದಾಖಲಿಸುವಲ್ಲಿ ಇದ್ದ ಸೈದ್ಧಾಂತಿಕ ಧೋರಣೆಗಳ ಬಗೆಗಿನ ವಿಶ್ಲೇಷಣೆ ಈ ಲೇಖನದ ಉದ್ದೇಶ. ಈ ನೆಲೆಯಲ್ಲಿ ಮಹಿಳೆಗೆ ಒದಗಿಬಂದ ಅವಕಾಶ, ಮಹಿಳೆಯನ್ನು ರಾಷ್ಟ್ರತ್ವದ ಪ್ರತಿಮೆಯಾಗಿ ಬಳಕೆಯಾಗಲು ಇದ್ದ ಪ್ರೇರಣೆ, ಮಹಿಳಾ ಐಡೆಂಟಿಟಿ, ಮಹಿಳಾ ರಾಷ್ಟ್ರೀಯತೆ ಎಂಬ ಪ್ರಮುಖ ವಿಷಯಗಳನ್ನು ಕುರಿತು ಚರ್ಚಿಸಲಾಗುವುದು.

ಭಾರತವು ಬ್ರಿಟಿಷರ ವಸಾಹತು ಆಳ್ವಿಕೆಯಿಂದ ಬಿಡುಗಡೆಗೊಳ್ಳಬೇಕೆಂಬುದು ಮುಖ್ಯಭೂಮಿಕೆಯಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರರ ಆಶಯವಾಗಿತ್ತು. ಇದನ್ನು "ರಾಜಕೀಯ ರಾಷ್ಟ್ರೀಯತೆ" ಎನ್ನಬಹುದು. ಇದನ್ನು ಸಾಕಾರಗೊಳಿಸಲು ಬಹುಸಂಖ್ಯೆಯ ಜನರನ್ನು ಈ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಅನಿವಾರ್ಯ ಕಂಡುಬಂತು. ಜನಸಮೂಹದ ಹಕ್ಕೊತ್ತಾಯ ಮತ್ತು ನಾಗರಿಕ ಸ್ವಾತಂತ್ರ್ಯಗಳ ಸ್ವರೂಪದಲ್ಲಿ ಈ ಹೋರಾಟವನ್ನು ರೂಪಿಸುವ ಅವಶ್ಯಕತೆಯಿತ್ತು (ಬಿಪನ್ ಚಂದ್ರ ೨೦೧೦:೧೩). 'ಮನೆಗೆ (ದೇಶ) ಬಿದ್ದ ಬೆಂಕಿ ಅಡುಗೆಮನೆಯನ್ನು (ಹೆಣ್ಣಿನ ಕಾರ್ಯಸ್ಥಾನ) ತಲುಪುವುದಕ್ಕೆ ಹೆಚ್ಚು ಸಮಯ ಹಿಡಿಯಲಿಲ್ಲ'. ಮಹಿಳೆಯು ಗೃಹಕಾರ್ಯಗಳನ್ನು ತ್ಯಜಿಸಬೇಕಾದ ಅನಿವಾರ್ಯತೆ ಉಂಟಾಯಿತು ಮತ್ತು ಆ ಮೂಲಕ ಸಾರ್ವಜನಿಕವಾಗಿ ಗುರುತಿಸಿಕೊಂಡು ಬ್ರಿಟಿಷರ ಆಳ್ವಿಕೆಯ ದಮನಕಾರಿ ನೀತಿಯನ್ನು ವಿರೋಧಿಸಲು ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವ ಸಂದರ್ಭವು ಎದುರಾಯಿತು. ಈ ನೆಲೆಯಲ್ಲಿ ಅನಿಬೆಸೆಂಟ್, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋಧರ ದಾಸಪ್ಪ, ಉಮಾಬಾಯಿ ಕುಂದಾಪುರ, ವಿಜಯಲಕ್ಷ್ಮಿ ಪಂಡಿತ್, ಬಳ್ಳಾರಿ ಸಿದ್ದಮ್ಮ ಮೊದಲಾದವರು ಮುಂಚೂಣಿಯಲ್ಲಿ ನಿಂತು ಹೋರಾಟವನ್ನು ಮುನ್ನಡೆಸಿದರು. ಹೀಗೆ ಮಹಿಳೆಯು ಸಾರ್ವಜನಿಕವಾಗಿ

ಕಾಣಿಸಿಕೊಳ್ಳಲು ಬೇಕಾದ ಅವಕಾಶದ ಬಾಗಿಲನ್ನು ರಾಷ್ಟ್ರೀಯ ಹೋರಾಟವು ತೆರೆಯಿತು ಎನ್ನಬಹುದು.

ಹೀಗೆ ಭಾರತದ ರಾಷ್ಟ್ರೀಯ ಚಳವಳಿಯ ಭಾಗವಾಗಿ ರಾಷ್ಟ್ರೀಯ ಹೋರಾಟದಲ್ಲಿ ೧೯೨೦–೩೦ರ ದಶಕದಲ್ಲಿ ಮೇಲ್ವರ್ಗದ ಮಹಿಳಾ ಗುಂಪುಗಳ ಕಾರ್ಯಚಟುವಟಿಕೆಗಳು ಮುನ್ನೆಲೆಗೆ ಬಂದುವು. ಮಹಿಳಾ ಸುಧಾರಣೆಯನ್ನು ಕೈಗೆತ್ತಿಕೊಳ್ಳಬೇಕೆಂದು ಈ ಗುಂಪುಗಳು ರಾಷ್ಟ್ರೀಯವಾದಿ ನಾಯಕರನ್ನು ಒತ್ತಾಯಪಡಿಸಿದರು. ಸ್ತ್ರೀವಾದಿ ವಿದ್ವಾಂಸರು ಈ ರಾಜಕೀಯ ಭಾಗವಹಿಸುವಿಕೆ ಎಂದರೇನು ಮತ್ತು ಅವರಿಗೆ ಅದರ ಪರಿಣಾಮಗಳೇನು ಎಂಬ ಪ್ರಶ್ನೆಗಳನ್ನು ಎತ್ತಿರುವರು. ಸ್ತ್ರೀವಾದಿಗಳಾದ ವಿಜಯ್ ಹಾಗೂ ಮಾರಿಯ ಮೈಸ್, ಗೇಯ್ಲ್ ಓಂವೆಟ್ ಹಾಗೂ ಸುಜಾತ ಪಟೇಲ್‌ರು ಅಭಿಪ್ರಾಯಪಟ್ಟಿರುವಂತೆ, ಸತ್ಯಾಗ್ರಹಗಳಲ್ಲಿ ಪಾಲ್ಗೊಳ್ಳುವುದರಿಂದ ಕುಟುಂಬದಲ್ಲಿ ಅಥವಾ ಸಮಾಜದಲ್ಲಿ ಮಹಿಳೆಯರ ಸ್ಥಾನವು ನಿಜವಾಗಿಯೂ ಬದಲಾಗಲಿಲ್ಲ. ಹೋರಾಟ ಮುಗಿದ ನಂತರ ಅವರು ತಮ್ಮ ಮನೆಗಳಿಗೆ ಹಿಂದಿರುಗಿದರು. ರಾಷ್ಟ್ರೀಯ ಚಳವಳಿಯಲ್ಲಿ ಗಾಂಧಿ ಮಹಿಳೆಯರನ್ನು ರಾಜಕೀಯವಾಗಿ ಪ್ರಯೋಜನಕಾರಿ ಸಾಧನಗಳಾಗಿ ಬಳಸಿಕೊಂಡಿರುವರು ಮತ್ತು ರಾಷ್ಟ್ರೀಯ ಹೋರಾಟದ ಭಾಗವಾಗಿದ್ದರೂ ಹೆಣ್ಣಿನ ಸ್ಥಾನಮಾನಗಳಲ್ಲಿ ಮಹತ್ತರ ಬದಲಾವಣೆಯಾಗಲಿಲ್ಲ (ಅಪರ್ಣಾ ಬಸು, ೧೯೯೫:೧೩) ಎಂಬುದಾಗಿ ವಾದಿಸಿರುವರು. ಇದಕ್ಕೆ ಪ್ರತಿಯಾಗಿ ಅಪರ್ಣಾ ಬಸು, ಕಮಲಾದೇವಿ ಚಟ್ಟೋಪಾಧ್ಯಾಯ, ದೇವಕಿ ಜೈನ್, ಲಕ್ಷ್ಮಿ ಮೆನನ್ ಅವರ ಅಭಿಪ್ರಾಯವು ಭಿನ್ನವಾಗಿದೆ. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವುದರ ಮೂಲಕ ಭಾರತೀಯ ಮಹಿಳೆಯರು ತಮ್ಮ ವಿಮೋಚನೆಗಾಗಿ ತಮ್ಮದೇ ಆದ ಹೋರಾಟಕ್ಕೆ ಸಹಾಯ ಮಾಡಿದರು ಮತ್ತು ಹೀಗೆ ಭಾರತದಲ್ಲಿ ಸ್ತ್ರೀವಾದ ಮತ್ತು ರಾಷ್ಟ್ರೀಯವಾದಗಳು ಪರಸ್ಪರ ಸಂಬಂಧ ಹೊಂದಿವೆ ಎಂದಿರುವರು.

ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳದೇ ಇದ್ದ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ತನ್ಮಯತೆಯಿಂದ ತೊಡಗಿಸಿಕೊಂಡ ಸ್ತ್ರೀಯರ ಕೊಡುಗೆಯೇನೂ ಕಡಿಮೆಯದಲ್ಲ. ಅನೇಕ ಭೂಗತರಿಗೆ, ಸ್ವಯಂ ಸೇವಕರಿಗೆ ಆಶ್ರಯ ನೀಡಿದವರು, ಅವರ ಗುಪ್ತ ಸಂದೇಶಗಳನ್ನು, ಕರಪತ್ರಗಳನ್ನು, ತಮ್ಮ ಕಟ್ಟಿಗೆ ಹೊರೆ, ಹುಲ್ಲು ಹೊರೆಗಳ ಮಧ್ಯೆ ಇಟ್ಟು ಮುಟ್ಟಿಸುತ್ತಿದ್ದವರು ಗ್ರಾಮೀಣ ಮಹಿಳೆಯರು. ಆಂದೋಲನಕ್ಕೆ, ಚಳುವಳಿಗಾರರ ಕುಟುಂಬಗಳ ನಿರ್ವಹಣೆಗೆ ಮನೆಮನೆಗೆ ಹೋಗಿ ಧನ–ಧಾನ್ಯ ಸಂಗ್ರಹಿಸುವ ಮತ್ತು ಹಂಚುವ ಕಾರ್ಯವನ್ನು ಕೈಗೊಂಡರು. ಇವರ ಇಂಥ ಕಾರ್ಯಚಟುವಟಿಕೆಗಳು ಗ್ರಾಮೀಣ ಜನರಲ್ಲಿ ಜಾಗೃತಿ ಮೂಡಿಸುವ ಬಗೆಯದಾಗಿತ್ತು ಆ ಮೂಲಕ ರಾಷ್ಟ್ರೀಯ ಹೋರಾಟವನ್ನು ಗ್ರಾಮೀಣ

ಜನತೆಯೊಂದಿಗೆ ಬೆಸೆಯುವಲ್ಲಿ ನೆರವು ನೀಡಿತ್ತು. ಉತ್ತರ ಕನ್ನಡದ ರಮಾಬಾಯಿ ಪ್ರಭು, ಭಾಗೀರಥಿ ಬಾಯಿ ಪುರಾಣಿಕ, ದೇವಯಾನಿ ನಾರಾಯಣ ಹೆಗಡೆ, ಶಿವಮೊಗ್ಗದ ಗೌರಮ್ಮ, ಕಾವೇರಮ್ಮ, ದುಗ್ಗಮ್ಮ, ಭಾಗೀರಥಿಯಮ್ಮ, ಸುಬ್ಬಮ್ಮ ಜೋಯಿಸರನ್ನು ಒಳಗೊಂಡಂತೆ ಅಸಂಖ್ಯಾತ ಮಹಿಳೆಯರು ಹೋರಾಟದಲ್ಲಿ ಭಾಗಿಯಾಗಿದ್ದರು (ಗಾಯತ್ರಿ ನಾವಡ, ೨೦೦೬:೨೫). ಈ ಕುರಿತು ಚರಿತ್ರೆಯಲ್ಲಿ ದಾಖಲಾಗಿರುವುದು ಕಡಿಮೆಯೇ. ಇದಕ್ಕೆ ಕಾರಣ "ನಮ್ಮ ಸ್ವಾತಂತ್ರ್ಯ ಚಳವಳಿಯ ಹೋರಾಟದ ಪರಿಕಲ್ಪನೆ ಪುರುಷ ನೆಲೆಯ ಸಾರ್ವಜನಿಕ ಜಗತ್ತನ್ನಷ್ಟೇ ಚಳವಳಿಯ ಚೌಕಟ್ಟಿನಲ್ಲಿ ಸ್ವೀಕರಿಸಿದೆ, 'ಮನೆಯೊಳಗಿನ ಹೆಣ್ಣು' ಎಲ್ಲ ಹೋರಾಟವನ್ನು ಚಳವಳಿಯ ಚೌಕಟ್ಟಿನಿಂದ ಹೊರಗಿಟ್ಟಿದೆ. ಹೀಗಾಗಿ, ಸ್ವಾತಂತ್ರ್ಯ ಚಳವಳಿಯ ಪರಿಕಲ್ಪನೆಯನ್ನು ಮರುರಚಿಸಬೇಕಾಗಿದೆ" ಎಂಬುದು ಗಾಯತ್ರಿ ನಾವಡ ಅವರ ಅಭಿಪ್ರಾಯ.

ಇದೇ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ರಚನೆಯಾದ ಚರಿತ್ರೆ ಬರವಣಿಗೆಗಳಲ್ಲಿ ಭಾರತದ ಪ್ರಾಚೀನ ಸಾಮ್ರಾಜ್ಯಗಳ ವೈಭವೀಕರಣವು ಸಾಮಾನ್ಯವಾಗಿತ್ತು. ಯಾಕೆಂದರೆ ರಾಷ್ಟ್ರೀಯವಾದಿ ಚರಿತ್ರೆಕಾರರು ಬ್ರಿಟಿಷ್ ಪೂರ್ವ ಭಾರತವನ್ನು ಕುರಿತ ಬ್ರಿಟಿಷರ ವಿಮರ್ಶೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಹಾಗಾಗಿ ಇವರ ಬರವಣಿಗೆಗಳು ಬ್ರಿಟಿಷ್ ಪೂರ್ವ ಭಾರತದ ಚರಿತ್ರೆಯ ರಮ್ಯ ಕಥನವಾಗಿದ್ದವು. ಪುರುಷ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದ ಬೆರಳೆಣಿಕೆಯ ಮಹಿಳೆಯರ ಕುರಿತ ಚರ್ಚೆಯನ್ನು ಈ ಬರವಣಿಗೆಗಳು ಒಳಗೊಂಡಿದ್ದವು. ಹೀಗಾಗಿ ರಾಜತ್ವದ ಪ್ರತಿನಿಧಿಗಳಾಗಿದ್ದ ರಾಣಿ ಚೆನ್ನಮ್ಮ, ರಾಣಿ ಲಕ್ಷ್ಮೀಬಾಯಿ ಅವರಂಥವರು ಸ್ಥಾನಗಳಿಸಿದರು. ದೇಶ ವಿಮೋಚನೆಗೆ ಭಾರತದ "ಅದ್ಭುತ ಸಾಧನೆ"ಗಳಿಂದ ಸ್ಫೂರ್ತಿ–ಪ್ರೇರಣೆಗಳನ್ನು ಪಡೆಯುವುದು ಮುಖ್ಯವಾಗಿತ್ತೇ ಹೊರತು, ಅದರ ಸಮಕಾಲೀನ ಸಂದರ್ಭದ (ಸ್ವಾತಂತ್ರ್ಯ ಹೋರಾಟ) ಮಹಿಳೆಯ ಅಸ್ತಿತ್ವ, ಹಕ್ಕುಗಳು, ಸ್ವಾತಂತ್ರ್ಯದ ಬಗೆಗೆ ವಿಮರ್ಶೆ ಕಂಡುಬರಲಿಲ್ಲ. ಇದರಿಂದಾಗಿ ಮಹಿಳೆ ಕುರಿತು ಅನಂತರದ ಚರಿತ್ರೆ ಬರವಣಿಗೆಯಲ್ಲಿ ಸಾಮಾನ್ಯಕೃತವಾದ (ಜನರಲೈಜ್) ಚೌಕಟ್ಟಿನ ನಿಲುವುಗಳೇ ದೀರ್ಘಾವಧಿಯವರೆಗೆ ಮುಂದುವರೆಯಿತು.

ರಾಷ್ಟ್ರೀಯ ಹೋರಾಟವು ಬಲಗೊಂಡಾಗ ಮಹಿಳೆಯರನ್ನು ಅಪ್ಪಟ ಭಾರತೀಯತೆಯ ರಕ್ಷಕರೆಂಬಂತೆ ಕಾಣಲಾಯಿತು. ಮಹಿಳೆಯರು ಭಾರತೀಯ ಆಧ್ಯಾತ್ಮಿಕ ಸತ್ವವನ್ನು ಕಾಪಾಡಿಕೊಂಡು ಬರುವ ಹೊಣೆಯನ್ನು ನಿರ್ವಹಿಸಬೇಕೆಂಬ ನಿರೀಕ್ಷೆ ಕುಡಿಯೊಡೆದದ್ದು ರಾಷ್ಟ್ರೀಯತೆಯ ಅಂತರಂಗದಲ್ಲೇ ಎನ್ನುತ್ತಾರೆ ಪಾರ್ಥ ಚಟರ್ಜಿ (ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ (ಸಂ), ೨೦೧೪:೧೬). ಹೀಗೆ ರಾಷ್ಟ್ರವೊಂದನ್ನು ಕಟ್ಟಲು ಬೇಕಾದ ರೂಪಕವನ್ನು ಭಾರತೀಯ ಮಾತೆ ಎಂಬ ನೆಲೆಯಲ್ಲಿ ಕಾಣಲಾಯಿತು. ಕನ್ನಡ ರಾಷ್ಟ್ರೀಯತೆಯ ಸಂದರ್ಭದಲ್ಲಿಯೂ ಈ

ರೂಪಕ–ಪ್ರತೀಕಗಳು ಬಳಕೆಯಾದವು. ‘ನಾಡು’ ಎಂಬ ನಪುಂಸಕ ಲಿಂಗಕ್ಕೆ ಹೆಣ್ಣಿನ ಚಹರೆಗಳನ್ನು ಜೋಡಿಸಿ ‘ಭುವನೇಶ್ವರಿ’, ‘‘ಕನ್ನಡ ತಾಯಿ’, ‘ಚಂಡಿ–ಚಾಮುಂಡಿ’, ‘ಕ್ರಾಂತಿ–ಕಾಳಿ’ ಎಂಬುದಾಗಿ ಸೃಷ್ಟಿಶೀಲರು ಪರಿಭಾವಿಸಿದರು (ಗೋವಿಂದರಾಜು ಸಿ. ಆರ್., ೨೦೦೫:೭೩), ಇದು ಮಹಿಳೆಯನ್ನು ಆಧ್ಯಾತ್ಮಿಕ ರಾಷ್ಟ್ರೀಯತೆಗೆ ಸೀಮಿತಗೊಳಿಸಿದ ರಾಷ್ಟ್ರತ್ವದ ಪ್ರತಿಮೆಯಾಗಿ ಬಳಕೆ ಮಾಡಿಕೊಂಡು ವಾಸ್ತವದಲ್ಲಿ ಕೆಳಸ್ಥಾನದಲ್ಲಿಡುವಲ್ಲಿ ಅನುಸರಿಸಲಾದ ಕ್ರಮವಾಗಿದ್ದಿತು. ಅಂದರೆ ದೈವೀಕರಣದ ಸಂದರ್ಭದಲ್ಲಿ ಸಾಮಾನ್ಯವಾಗಿ ಆಗುವಂತೆ ಇಲ್ಲೂ ನಿಜವಾದ ಮನುಷ್ಯ ವಾಸ್ತವಿಕ ಸಮುದಾಯ ಮರೆಯಾಗಿ ಸ್ತ್ರೀಯ ಸಾಂಕೇತಿಕ ವ್ಯಕ್ತಿತ್ವ ವಿಜೃಂಬಿಸಿತು. ಇದನ್ನು ಸ್ತ್ರೀವಾದಿ ಚಿಂತಕಿ ಮೈತ್ರೇಯಿ ಕೃಷ್ಣರಾಜ್ ಹೇಳುವಂತೆ ‘‘ಭಾರತದಲ್ಲಿ ತಾಯ್ತನವೆನ್ನುವುದು ಸಬಲೀಕರಣವಿಲ್ಲದ ವೈಭವೀಕರಣ’’ ಎಂಬುದಕ್ಕೆ ಹೋಲಿಸಬಹುದು.

ಇದಕ್ಕೆ ಭಿನ್ನವಾಗಿ ‘ಆದರ್ಶ ಗೃಹಿಣಿ’ಯ ಕಲ್ಪನೆಯು ಭಾರತೀಯ ರಾಷ್ಟ್ರೀಯವಾದಿಗಳು ಮತ್ತು ಮಧ್ಯಮವರ್ಗದಲ್ಲಿ ಹೆಣ್ತನದ ಗ್ರಹಿಕೆಯಾಗಿ ಸ್ಥಾಪಿತವಾಯಿತು. ಶಕುಂತಲೆ ಪಾತ್ರವು ಚಾರಿತ್ರಿಕವಾಗಿ ನಿರೂಪಿತವಾಗಿದ್ದು ರಾಷ್ಟ್ರೀಯ ಹೋರಾಟದ ಕಾಲದಲ್ಲಿ ಆದ ಕೆಳಸ್ಥಾನವನ್ನು ಕುರಿತು ರೊಮಿಲಾ ಥಾಪರ್ ಅವರ ಪಠ್ಯಸ್ವರೂಪದ ವಿಶ್ಲೇಷಣೆಯಲ್ಲಿ ಕಾಣಬಹುದು. ಸ್ವತಂತ್ರಳಾಗಿದ್ದು ತನ್ನನ್ನು ಸರಿಯಾಗಿ ನಡೆಸಿಕೊಳ್ಳಬೇಕೆಂದು ಹಕ್ಕೊತ್ತಾಯ ಮಾಡುವ ಮಹಾಭಾರತದ ಶಕುಂತಲೆಯನ್ನು ಕಡೆಗಣಿಸಿ, ತನ್ನ ಸದ್ಗುಣಗಳನ್ನು ಪುರುಷ ಪ್ರಪಂಚವು ಗುರುತಿಸುವುದಕ್ಕಾಗಿ ತಾಳ್ಮೆಯಿಂದ ಕಾಯುವ, ನಮ್ರತೆಯ ಪ್ರತಿರೂಪವಾದ ಕಾಳಿದಾಸನ ಶಕುಂತಲೆಯನ್ನು (ಶೈಲಜಾ ವೇ., ೨೦೦೮:೮೮) ಆದರ್ಶೀಕರಿಸಲಾಯಿತು. ಈ ಪ್ರಕ್ರಿಯೆಯು ಪರಂಪರೆಯನ್ನು ಕಟ್ಟುವಲ್ಲಿ ಅಂದಿನವರ ಪ್ರಜ್ಞಾಪೂರ್ವಕ ಆಯ್ಕೆಯಾಗಿತ್ತು. ‘ಶಾಕುಂತಲೆ’ ಪಾತ್ರಕ್ಕೆ ಸಹನಶೀಲತೆಯ ಮೌಲ್ಯವ್ಯವಸ್ಥೆಯನ್ನು ನಿರ್ದಿಷ್ಟಗೊಳಿಸುವ ಮತ್ತು ಆ ಮೂಲಕ ಆದರ್ಶ ಭಾರತೀಯ ಮಹಿಳೆಯ ಕಲ್ಪನೆಯನ್ನು ಹುಟ್ಟುಹಾಕುವ ಪ್ರಯತ್ನವಾಯಿತು ಎನ್ನಬಹುದು. ಇದು ಕಲೆಯ ಇತರ ಪ್ರಕಾರಗಳಲ್ಲಿಯೂ ಪ್ರತಿಬಿಂಬಿತವಾಯಿತು. ಸ್ಥಳೀಯ ಮೌಖಿಕ ಸಾಹಿತ್ಯವನ್ನು ಆಯ್ದು ಪ್ರಕಟಿಸುವಾಗಲೂ ಈ ಧೋರಣೆ ಇತ್ತು ಎಂಬುದನ್ನು ‘‘ಕೆರೆಗೆ ಹಾರ’’ದ ಕಥನ ಗೀತೆಯ ಉದಾಹರಣೆಯೊಂದಿಗೆ ತಿಳಿಯಬಹುದು. ಕೆರೆಗೆ ಹಾರದ ಆಶಯವಿರುವ ಇತರ ಎಲ್ಲ ಗೀತೆ ಅಥವಾ ಪಾಠಗಳನ್ನು ಕಡೆಗಣಿಸಿ, ಬೆಟಗೇರಿ ಕೃಷ್ಣ ಶರ್ಮರು ಸಂಗ್ರಹಿಸಿ ೧೯೪೧ರಲ್ಲಿ ಜಯಕರ್ನಾಟಕದಲ್ಲಿ ಪ್ರಕಟಿಸಿದ ಪಾಠಕ್ಕೆ ಮಾತ್ರವೇ ಹೆಚ್ಚಿನ ಆದ್ಯತೆ ನೀಡಿದರು. ಇದರಿಂದಾದ ಪರಿಣಾಮವೆಂದರೆ ತ್ಯಾಗ, ಮೌನ, ವಿಧೇಯತೆ ಇವೆಲ್ಲ ಹೆಣ್ಣಿನಲ್ಲಿರಬೇಕಾದ ಸದ್ಗುಣಗಳು, ಇಂಥ ಗುಣಗಳನ್ನು ಹೊಂದಿದ ಕೆರೆಗೆ ಹಾರದ

ಭಾಗೀರತಿ ಆದರ್ಶಪ್ರಾಯಳಾದ ಸ್ತ್ರೀ ಎಂಬ ತೀರ್ಮಾನ (ಸಂಧ್ಯಾರೆಡ್ಡಿ ಕೆ.ಆರ್., ೨೦೧೬:೮೦). ಆದರೆ ಈ ಬಗೆಯ ಆದರ್ಶಗಳು ಸಮಕಾಲೀನ ಭಾರತದಲ್ಲಿ ಮಹಿಳೆಯು ತನ್ನ ನಾಗರಿಕ ಹಕ್ಕುಗಳನ್ನು ಚಲಾಯಿಸಲು ಅಡೆತಡೆಯನ್ನು ಒಡ್ಡುತ್ತಿರುವುದರಲ್ಲಿ ಯಶಸ್ವಿಯಾಗಿದೆ.

ರಾಷ್ಟ್ರವು ಸಾಂಸ್ಕೃತಿಕ ನೆಲೆಯಲ್ಲಿ ಕಲ್ಪಿಸಿಕೊಳ್ಳಬೇಕಿದ್ದ ಅನಿವಾರ್ಯ ಅಂದು ಇತ್ತು. ಆದರೆ ರಾಷ್ಟ್ರವೊಂದು ಸಾರ್ವಭೌಮ ಅನ್ನಿಸಿಕೊಂಡು ತನ್ನದೇ ಸಶಕ್ತ ಆಡಳಿತ ವ್ಯವಸ್ಥೆಯನ್ನು ರೂಢಿಸಿಕೊಂಡು ಸಾಗಿದಾಗ ಈ ರಮ್ಯವಾದದ ನಿಲುವಿನಿಂದ ವಾಸ್ತವಕ್ಕೆ ಮರಳುವುದು ಅಗತ್ಯ ಹಾಗಾಗಿ ದೇಶವೆಂದರೆ ಅಲೌಕಿಕ ಇರುವಿಕೆಯಲ್ಲ, ಅತಿಮಾನುಷ ರೂಪವೂ ಅಲ್ಲ. ಅದು ಒಂದು ಮಾನದಂಡ. ಆ ಮೂಲಕ ಪ್ರಭುತ್ವದ ನೈತಿಕ, ಮೌಲ್ಯಯುತ ಸಾಮರ್ಥ್ಯಗಳ ವಿಶ್ಲೇಷಣೆಗೆ ಅವಕಾಶವನ್ನೂ ಕಲ್ಪಿಸುತ್ತದೆ. ಸಮಾನತೆ, ನ್ಯಾಯಪರತೆ, ಸ್ವಾತಂತ್ರ್ಯ ಮತ್ತು ಘನತೆಗಳ ಕುರಿತಾಗಿ ಅದರ ಸಾಮರ್ಥ್ಯಗಳನ್ನು ಪ್ರಮಾಣೀಕರಿಸುವುದಕ್ಕೂ ಅವಕಾಶ ಕಲ್ಪಿಸುತ್ತದೆ (ಗೋಪಾಲ್ ಗುರು, ೨೦೨೦:೩೯–೪೦). ಈ ಮೌಲ್ಯಗಳೆಲ್ಲವನ್ನು ಸ್ತ್ರೀನೋಟ ಕ್ರಮದಿಂದ ವಿಶ್ಲೇಷಿಸಬೇಕಾದ ಜರೂರು ಇವತ್ತಿನದು ಎನ್ನಬಹುದು. ಅಂದರೆ ಸ್ತ್ರೀಯರು ಭಾವಿಸಿದ ರಾಷ್ಟ್ರ ಎಂತಹುದು ಎಂಬ ಪ್ರಶ್ನೆಯು ಮುಖ್ಯವಾಗುತ್ತದೆ.

ಹೀಗಾಗಿ ಮಹಿಳಾ ಐಡೆಂಟಿಟಿ ಮತ್ತು ಮಹಿಳಾ ಸ್ವಾತಂತ್ರ್ಯಗಳನ್ನು ಮುಖ್ಯ ನೆಲೆಯ 'ರಾಜಕೀಯ ರಾಷ್ಟ್ರೀಯತೆಗೆ' ಪ್ರತಿಯಾಗಿ 'ಮಹಿಳಾ ರಾಷ್ಟ್ರೀಯತೆ' ಎಂಬ ಪರಿಕಲ್ಪನೆಯ ಮೂಲಕ ವಿವರಿಸಿಕೊಳ್ಳಬೇಕಿದೆ. 'ದೇಶದ ಸ್ವಾತಂತ್ರ್ಯವೆಂದರೆ 'ಹಲವು ಸ್ವಾತಂತ್ರ್ಯಗಳು' ಎಂದು ಭಾವಿಸುವುದಾದರೆ ಮುಖ್ಯವಾಗಿ ಇದರಲ್ಲಿ ಸಮಾಜ, ಅರ್ಥ, ರಾಜಕಾರಣ, ಧರ್ಮಗಳ ಮರುನಿರ್ವಚನೆಯ ಬಗ್ಗೆ 'ಮಹಿಳಾ ಧ್ವನಿ' ಏನಾಗಿತ್ತು? ರಾಷ್ಟ್ರದ ಸ್ವಾತಂತ್ರ್ಯ ಮಹಿಳೆಯರ ಸ್ವಾತಂತ್ರ್ಯಕ್ಕೆ ಹೇಗೆ ಬೆಂಬಲ ನೀಡಿದ್ದಿತು? ಬದಲಾದ ಸಂದರ್ಭದಲ್ಲಿ ಪ್ರಭುತ್ವದ (ವಸಾಹತುಪೂರ್ವ ರಾಜತ್ವ) ನಾಯಕತ್ವಕ್ಕೆ ವಿರುದ್ಧವಾದ ಜನಹೋರಾಟವು (ರಾಷ್ಟ್ರೀಯ ಹೋರಾಟ) 'ಮಹಿಳಾ ಐಡೆಂಟಿಟಿ'ಯನ್ನು ಹೇಗೆ ಸ್ವೀಕರಿಸಿತು? ಎಂಬಿವೇ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಜೊತೆಗೆ ಮಹಿಳಾ ವಲಯವನ್ನು ಸುಧಾರಿಸುವ, ಅದನ್ನು ಆಧುನಿಕ ಮೌಲ್ಯಗಳ ಮೇಲೆ ಮರುನಿರ್ಮಿಸುವ ಆಶಯ ಇಂದು ಸಾಕಾರಗೊಂಡಿದೆಯಾ ಎಂಬ ಪ್ರಶ್ನೆಯೂ ಮುಖ್ಯವಾದುದು. ಇದನ್ನು ಸಂಕ್ಷಿಪ್ತವಾಗಿ 'ಮಹಿಳಾ ರಾಷ್ಟ್ರೀಯತೆ' ಎನ್ನಬಹುದು.

ಒಟ್ಟಾರೆಯಾಗಿ ಸ್ವಾತಂತ್ರ್ಯ ಹೋರಾಟವನ್ನು ಕುರಿತ ಪ್ರಚಲಿತ ಸಂವಾದಗಳ ದೊಡ್ಡ ಮಿತಿಯೆಂದರೆ ದೇಶದ ಸ್ವಾತಂತ್ರ್ಯವನ್ನು ಒಂದು ದಿನಾಂಕಕ್ಕೆ (೧೯೪೭ರ ಆಗಸ್ಟ್ ೧೫ಕ್ಕೆ) ಅಂತಿಮಗೊಳಿಸಿಬಿಟ್ಟು 'ಸ್ವಾತಂತ್ರ್ಯಕ್ಕಾಗಿನ ಹೋರಾಟ'ದ ಅವಧಿಯನ್ನೇ

'ಸ್ವಾತಂತ್ರ್ಯದ ಅವಧಿ'ಯೆಂಬಂತೆ ಚಿತ್ರಿಸಿ ಸಂವಾದವನ್ನು ಈ ಹೋರಾಟದ ಅವಧಿಗೆ ಸೀಮಿತಗೊಳಿಸಿ ಬಿಡುವುದು. ವಾಸ್ತವವಾಗಿ ಅಂದಿನ ರಾಷ್ಟ್ರೀಯ ಹೋರಾಟವು 'ಸ್ವಾತಂತ್ರ್ಯಕ್ಕಾಗಿನ ಹೋರಾಟ'ವಾಗಿದ್ದಿತು, ಸ್ವಾತಂತ್ರ್ಯವು ಜನತೆಗೆ ದೊರಕಬೇಕಿರುವುದು 'ಸ್ವಾತಂತ್ರ್ಯಕ್ಕಾಗಿನ ಹೋರಾಟ'ದ (೧೯೪೭ರ) ನಂತರವೇ ಎನ್ನಬಹುದು. ನಿಜಾರ್ಥದಲ್ಲಿ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಭಾವಿಸಿದ್ದ ಉದಾತ್ತ ಮೌಲ್ಯಗಳು ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಿಂದ ನಿರಾಕರಣೆಗೊಳಗಾಗಿದ್ದವು. ಈ ಮೌಲ್ಯಗಳು ಸಾಕಾರಗೊಂಡು ಆಚರಣೆಗೆ ಬರಬೇಕಿದ್ದುದು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲೇ. ಇದಕ್ಕೆ ದಿಕ್ಸೂಚಿಯನ್ನು ಒದಗಿಸಿದ್ದು "ಭಾರತದ ಸಂವಿಧಾನ". ಸಂವಿಧಾನದ ಆಶಯಗಳು ಸ್ವಾತಂತ್ರ್ಯ ಹೋರಾಟದ ಆಶಯಗಳ ಮೊತ್ತವಾಗಿ ಅದರಲ್ಲಿ ಪ್ರತಿಫಲನಗೊಂಡಿವೆ. ಈ ನೆಲೆಯಲ್ಲಿ ದೇಶದ 'ಹಲವು ಸ್ವಾತಂತ್ರ್ಯ'ಗಳಲ್ಲಿ 'ಮಹಿಳಾ ಸ್ವಾತಂತ್ರ್ಯ'ವು ಎಷ್ಟರಮಟ್ಟಿಗೆ ದಕ್ಕಿದೆ ಎಂದು ಕೇಳುವ ಜರೂರು ಇಂದಿನದು. ಅಂದರೆ ಭಾರತವು ಸ್ವಾತಂತ್ರ್ಯಗೊಂಡ ನಂತರದ ಈ ಏಳು ದಶಕಗಳಲ್ಲಿ ಸಮಾನತೆ, ನ್ಯಾಯಪರತೆ, ಸ್ವಾತಂತ್ರ್ಯ ಮತ್ತು ಘನತೆಗಳು ಈ ದೇಶದ ಮಹಿಳೆಗೆ ಎಷ್ಟು ತಲುಪಿದೆ ಎಂಬುದರ ಮೌಲ್ಯಮಾಪನದ ಅಗತ್ಯತೆ ಇದೆ.

## ಪರಾಮರ್ಶನ ಗ್ರಂಥಗಳು:


1. ಅಪರ್ಣಾ ಬಸು, (೧೯೯೫), ಎ ನ್ಯಾಶನಲಿಸ್ಟ್ ಫೆಮಿನಿಸ್ಟ್: ಮೃದುಲಾ ಸಾರಾಬಾಯಿ (೧೯೧೧–೧೯೭೪), ಇಂಡಿಯನ್ ಜರ್ನಲ್ ಆಫ್ ಜೆಂಡರ್ ಸ್ಟಡೀಸ್ ಸಂಚಿಕೆ: ೨, ಸಂಖ್ಯೆ: ೧, ಜನವರಿ–ಜೂನ್.
2. ಗಾಯತ್ರಿ ನಾವಡ, (೨೦೦೩), ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಜಾನಕಿ ನಾಯರ್, ರೋಹಿತ್ ಅಜಾದ್ & ಮಲ್ಲಾರಿಕಾ ಸಿನ್ಹಾರಾಯ್ (ಸಂ), ಶ್ರೀಪಾದಭಟ್ ಬಿ. (ಅನು), (೨೦೨೦), ಜೆಎನ್‌ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು, ಕ್ರಿಯಾ ಮಾಧ್ಯಮ ಪ್ರೈ.ಲಿ., ಬೆಂಗಳೂರು
4. ಗೋವಿಂದರಾಜು ಸಿ.ಆರ್., (೨೦೦೫), ಕನ್ನಡಮ್ಮ: ಹೆಣ್ಣು ಸಂಕಥನದ ನಾಡುನುಡಿ ರೂಪಕ–ಪ್ರತೀಕಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ (ಸಂ), (೨೦೧೪), ಸ್ತ್ರೀವಾದಿ ಸಾಹಿತ್ಯ ವಿಮರ್ಶೆ: ಸಂಸ್ಕೃತಿ, ಇತಿಹಾಸ, ರಾಜಕಾರಣ, ಭಾರತೀಯ ಸಂದರ್ಭ, ಅಭಿನವ ಪ್ರಕಾಶನ, ಬೆಂಗಳೂರು.
6. ಬಿಪನ್ ಚಂದ್ರ, (೨೦೧೦), ಇಂಡಿಯನ್ ನ್ಯಾಶನಲ್ ಮೂವ್‌ಮೆಂಟ್: ದಿ ಲಾಂಗ್–ಟರ್ಮ್ ಡೈನಾಮಿಕ್ಸ್, ಹರ್–ಆನಂದ್ ಪಬ್ಲಿಕೇಶನ್ಸ್ ಪ್ರೈ.ಲಿ., ನವದೆಹಲಿ.
7. ಚಂದ್ರಶೇಖರ್ ಎಸ್. ಮತ್ತುಸುರೇಂದ್ರ ರಾವ್ ಬಿ. (ಸಂ), (2016), ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಸಂಪುಟ–೬, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.